# ಆಹಾ ಸುದ್ದಿ!

★ ಸಸಿತೋಟ



ಬ್ರೆಜಿಲ್‌ನ ಬೋರ್ಗ್ಸ್ ಕುಟುಂಬದ ಜೊತೆ ಬೆಳಗಿನ ಕಾಫಿ- ತಿಂಡಿ ಮಾಡಲು ಈ ಹುಲಿ ಟಾಮ್ ಆಗಮಿಸಿದೆ. ಈ ಕುಟುಂಬ ಮನೆಯಲ್ಲೇ 8 ಹುಲಿ ಹಾಗೂ ಎರಡು ಹೆಣ್ಣು ಸಿಂಹಗಳನ್ನು ಸರ್ಕಸ್‌ನಿಂದ ರಕ್ಷಿಸಿ ಸಾಕುತ್ತಿದ್ದು ಅಲ್ಲಿಯ ಆಡಳಿತದ ಕಣ್ಣು ಕೆಂಪಗಾಗಿಸಿದೆಯಂತೆ. ಹುಲಿಗಳನ್ನು ಅಲ್ಲಿಂದ ಸಾಗಿಸುವುದಲ್ಲದೇ ಸಂತಾನ ಹರಣ ಚಿಕಿತ್ಸೆ ಮಾಡಿಸಿಯೇ ಸಿದ್ಧ ಎಂದು ಆಡಳಿತ ಪಣ ತೊಟ್ಟರೆ, ಅದರ ವಿರುದ್ಧ ಬೋರ್ಗ್ಸ್ ಕುಟುಂಬ ಕೋರ್ಟ್ ಮೆಟ್ಟಲೇರಿದೆ. ಪಾಪ, ಮರಿಗಳನ್ನು ಪಡೆಯಬೇಕೋ, ಬೇಡವೋ ಎಂಬ ಹುಲಿಯ ಹಕ್ಕಿನ ಬಗ್ಗೆ ಯಾರೂ ಕೇಳುವವರೇ ಇಲ್ಲ.

ಈತ 21 ವರ್ಷದ ಸಿಂಗಾಪುರದ ನಿರುದ್ಯೋಗಿ ಯುವಕ ಜಸ್ಟಿಸ್. ಕೆಲವು ದಿನಗಳ ಹಿಂದೆ ಸೂಪರ್‌ಹೀರೊ ವೇಷ ಧರಿಸಿ ರೈಲ್ವೆಯಲ್ಲಿ ಪ್ರಯಾಣಿಕರಿಗೆ ಸಾಮಾಜಿಕ ಘನತೆಯ ಕುರಿತು ಭಾಷಣ ಬಿಗಿದ. ಈ ದೃಶ್ಯ ಯೂ ಟ್ಯೂಬ್‌ನಲ್ಲಿ ಕಾಣಿಸಿಕೊಂಡಿದ್ದೇ ಈತ ನಿಜವಾಗಲೂ ಹೀರೋ ಆದ. ಟಿ.ವಿ.ಗೆ ಸಂದರ್ಶನ, ಸಿನಿಮಾದಲ್ಲಿ ನಟಿಸಲು ಆಹ್ವಾನಗಳ ಸುರಿಮಳೆ... ಈಗ ಜಸ್ಟಿಸ್‌ಗೆ ನಿರುದ್ಯೋಗ ಮಾಡಲು ಸಮಯವೇ ಸಾಲದಂತೆ.



ಒರೆಗಾನ್‌ನ ಪಾನಗೃಹದ ಪರಿಚಾರಕಿ ಕೆಫಾರ್ಟ್‌ಗೆ ಗಿರಾಕಿಯೊಬ್ಬ ಹಣದ ಬದಲು ಲಾಟರಿ ಟಿಕೆಟ್ ಅನ್ನು ಟಿಪ್ಸ್ ಆಗಿ ನೀಡಿದ. ಹಣಕ್ಕಾಗಿ ತಗಾದೆ ಮಾಡದೆ ಟಿಕೆಟ್ ತೆಗೆದುಕೊಂಡಿದ್ದಳು ಕೆಫಾರ್ಟ್. ಅದೇ ಟಿಕೆಟ್‌ಗೆ 17 ಸಾವಿರ ಡಾಲರ್ ಬಹುಮಾನ ಬಂತಂತೆ. ಲಾಟರಿ ಹೊಡೆಯುವುದೆಂದರೆ ಇದೇ ಇರಬಹುದು.




ಬ್ರಿಟನ್ನಿನ ಹೆದ್ದಾರಿಗಳ ಪಕ್ಕ ಈ ವಾಹನ ಕಂ ಹೊಟೇಲ್‌ಗಳದ್ದೇ ಕಾರುಬಾರು. ಅಗ್ಗದ ತಿಂಡಿ, ಚಹ ಪ್ರಯಾಣಿಕರಿಗೆ ಪೂರೈಸಲು ಈ ವ್ಯಾನ್ ಹೊಟೇಲ್‌ಗಳು ಸಾಲು ಹಚ್ಚಿವೆಯಂತೆ. ಭಾರತ ಎಲ್ಲವನ್ನೂ ಬ್ರಿಟನ್ನಿನಂತೆ ಅನುಕರಿಸುತ್ತಿತ್ತು. ಈ ವಿಷಯದಲ್ಲಿ ಮಾತ್ರ ಅವರು ನಮ್ಮನ್ನೇ ಅನುಕರಿಸುತ್ತಿರುವುದನ್ನು ನೋಡಿದರೆ, ಬ್ರಿಟನ್ನಿನಲ್ಲೂ ಸೂರ್ಯ ಮುಳುಗಲು ಶುರು ಮಾಡಿದ್ದಾನೆ ಎನ್ನಬಹುದು.

ಅಮೆರಿಕಾದ ಸಿಯಾಟ್ಲ್‌ನ ಮೈಕ್ 'ಹೋಂಲೆಸ್ ಟೂರ್' ಮಾಡಿಸುವುದಾಗಿ ವೆಬ್‌ಸೈಟ್‌ನಲ್ಲಿ ಹಾಕಿಕೊಂಡಿದ್ದಾನಂತೆ. 2000 ಡಾಲರ್ ಕೊಟ್ಟರಾಯಿತು, ಮೂರು ದಿನಗಳ ಕಾಲ ತಲೆಯ ಮೇಲೆ ಸೂರಿಲ್ಲದವರು ಹೇಗೆ ಬದುಕುತ್ತಾರೋ ಆ ರೀತಿಯ ಅನುಭವ ಮಾಡಿಸುತ್ತಾನಂತೆ. ಇದಕ್ಕೆ 'ಕೋರ್ಸ್ ಇನ್ ಅಪ್ಲೈಡ್ ಹೋಂಲೆಸ್‌ನೆಸ್' ಎಂಬ ಹೆಸರನ್ನೇ ಕೊಟ್ಟುಕೊಂಡು ದುಡ್ಡು ಮಾಡಲು ಹೊರಟಿದ್ದಾನಂತೆ ಸೂರಿಲ್ಲದೇ ಹಳೆಯ ವಾಹನವೊಂದರಲ್ಲಿ ಬದುಕುತ್ತಿರುವ ಈ ಭೂಪ. ಇದುವರೆಗೆ ಯಾರೂ ಕೋರ್ಸ್‌ಗೆ ಅಪ್ಲೈ ಮಾಡಿಲ್ಲವಂತೆ.

ಹಿಂದೊಮ್ಮೆ ಜೇನ್ನೊಣಗಳು ರಾಸಾಯನಿಕ ತಂದು ಜೇನುತುಪ್ಪಕ್ಕೆ ರಾಸಾಯನಿಕದ ವಾಸನೆ ಸೇರಿಸಿದ್ದು ವರದಿಯಾಗಿತ್ತು. ಇದೀಗ ಫ್ರಾನ್ಸ್‌ನ ಬರ್ನಿನ್‌ನಲ್ಲಿ ಜೇನುತುಪ್ಪ ಬೇರೆ ಬಣ್ಣದಲ್ಲಿ ತಯಾರಾಗಿದೆ. ಹಸಿರು ರಂಗಿನಿಂದ ಕಂಗೊಳಿಸುವ ಈ ಜೇನುತುಪ್ಪದ ಜಾಡು ಹಿಡಿದು ಹೊರಟಾಗ ಜೇನ್ನೊಣಗಳು ಸಮೀಪದ ತಂಪು ಪಾನೀಯದ ಕಾರ್ಖಾನೆಯ ಸಿರಪ್ ಅನ್ನು ಹೊತ್ತು ತರುತ್ತವೆ ಎಂದು ಗೊತ್ತಾಯ್ತಂತೆ. ಇದುವರೆಗೆ ಮನುಷ್ಯರು ಮಾತ್ರ ಕಲಬೆರಕೆ ಮಾಡುತ್ತಿದ್ದರು, ಈಗ ಈ ನೊಣಗಳು ಮನುಷ್ಯನಿಗೆ ಪೈಪೋಟಿ ನೀಡುತ್ತಿವೆ.

